ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	951 (998)
ಉತ್ತರಿಸುವ ದಿನಾಂಕ	22-12-2021
ಮಾನ್ಯ ಸದಸ್ಯರ ಹೆಸರು	ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ.ಸಂ	ಕೋರಿರುವ ಮಾಹಿತಿ	ಉತ್ತರ
ಅ)	ಬೆಳಗಾವಿ ಉಪ ನೋಂದಣಾಧಿಕಾರಿಯವರು 2018 ರಲ್ಲಿ ಸರ್ವೆ ನಂ.3928, 3929, 3929/1, 3929/2 ಮತ್ತು 3929/5ನ್ನು ಕಡಿಮೆ ದರಕ್ಕೆ ನೋಂದಣಿ ಮಾಡುವ ಮೂಲಕ ಸರ್ಕಾರಕ್ಕೆ ರೂ.12.92 ಕೋಟಿ ಮುದ್ರಾಂಕ ಶುಲ್ಕ ನಷ್ಟವುಂಟು ಮಾಡಿರುವ ಆರೋಪವನ್ನು ಹೊಂದಿರುವ ಉಪ ನೋಂದಣಾಧಿಕಾರಿಯವರ ವಿರುದ್ಧ ಯಾವ ಶಿಸ್ತು ಕ್ರಮ ಕೈಗೊಳ್ಳಲಾಗಿದೆ: ಕೈಗೊಳ್ಳದಿದ್ದಲ್ಲಿ ಕಾರಣವೇನು; ಸದರಿಯವರನ್ನು ಯಾವಾಗ ಅಮಾನತ್ತುಗೊಳಿಸಲಾಗುವುದು;	ಬೆಳಗಾವಿ ಉಪ ನೋಂದಣಾಧಿಕಾರಿ ವಿರುದ್ಧದ ಆರೋಪದ ಕುರಿತು ಇಲಾಖಾ ವಿಚಾರಣೆಯನ್ನು ನಡೆಸಲು ದಿನಾಂಕ: 15-06-2021ರಲ್ಲಿ ದೋಷಾರೋಪಣಾ ಪಟ್ಟಿಯನ್ನು ಹೊರಡಿಸಲಾಗಿರುತ್ತದೆ (ಅನುಬಂಧ-1). ಉಪ ನೊಂದಣಾಧಿಕಾರಿ, ಬೆಳಗಾವಿ ಇವರನ್ನು ದಿನಾಂಕ: 24-03-2021ರಲ್ಲಿ ಅಮಾನತು ಗೊಳಿಸಲಾಗಿರುತ್ತದೆ (ಅನುಬಂಧ-2).
ಆ)	ಬೆಳಗಾವಿ ಉಪ ನೋಂದಣಾಧಿಕಾರಿಯವರ ಮೇಲೆ ಸರ್ಕಾರಕ್ಕೆ ಉದ್ದೇಶಪೂರ್ವಕವಾಗಿ ಯೋಜನಾಬದ್ಧವಾಗಿ ಪೂರ್ವ ಸಿದ್ಧತೆಯೊಂದಿಗೆ ನಷ್ಟ ಉಂಟು ಮಾಡಿರುವ ಕುರಿತು ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲಾಗಿದೆಯೇ; ಇಲ್ಲವಾದಲ್ಲಿ ಎಂದು ದಾಖಲು ಮಾಡಲಾಗುವುದು;	ಬೆಳಗಾವಿ ಉಪ ನೋಂದಣಾಧಿಕಾರಿಯ ವಿರುದ್ಧ ಇಲಾಖಾ ವಿಚಾರಣೆ ಪ್ರಕ್ರಿಯೆ ಜಾರಿಯಲ್ಲಿದ್ದು, ಇಲಾಖಾ ವಿಚಾರಣೆಯ ವರದಿಯ ಆಧಾರದ ಮೇರೆಗೆ ಕ್ರಿಮಿನಲ್ ಮೊಕದ್ದಮೆ ಹೂಡಲು ಕ್ರಮ ಕೈಗೊಳ್ಳಲಾಗುತ್ತದೆ.
ಇ)	ಸರ್ಕಾರಕ್ಕೆ ನಷ್ಟವಾದ ರೂ.12.92 ಕೋಟಿ ಮೊತ್ತವನ್ನು ಸಂಬಂಧಿತ ಉಪ ನೋಂದಣಾಧಿಕಾರಿಯವರಿಂದ ವಸೂಲು ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಸದರಿಯವರ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ಜಪ್ತಿ ಮಾಡುವ ಕುರಿತು ಸರ್ಕಾರದ ನಿಲುವೇನು?	ಸದರಿ ಪ್ರಕರಣದಲ್ಲಿ ಕೊರತೆಯಾದ ಶುಲ್ಕ ರೂ.12.98ಕೋಟಿಗಳನ್ನು ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 46ಎ ಮತ್ತು ನೋಂದಣಿ ಕಾಯ್ದೆ 1908ರ ಕಲಂ 80ಎ ರಡಿ ಪ್ರಕರಣ ದಾಖಲಿಸಿಕೊಂಡು ವಿಚಾರಣಾ ಪ್ರಕ್ರಿಯೆ ನಡೆಸಿ ಪಕ್ಷಗಾರರಿಂದ ಕೊರತೆ ಶುಲ್ಕದ ವಸೂಲಾತಿಗಾಗಿ ದಿನಾಂಕ: 25-11-2020ರಂದು ಆದೇಶ ಹೊರಡಿಸಲಾಗಿದೆ (ಅನುಬಂಧ-3).

		ಸದರಿ ಆದೇಶದ ವಿರುದ್ಧ ಪಕ್ಷಗಾರರು ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ ಇಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದು, ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಧಿಕರಣವು ಆದೇಶ ಸಂಖ್ಯೆ: ಆರ್‌ಇವಿ-ಎಪಿಎಲ್-187-195/ 2020-21, ದಿನಾಂಕ: 08-07-2021ರಲ್ಲಿ ಜಿಲ್ಲಾ ನೋಂದಣಾಧಿಕಾರಿಗಳ ಆದೇಶಕ್ಕೆ ತಡೆಯಾಜ್ಞೆ ನೀಡಿದ್ದು, ಸದರಿ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ಕೈಗೊಂಡು, ಆರೋಪಿತರಿಂದ ಕೊರತೆ ಶುಲ್ಕಗಳನ್ನು ವಸೂಲಾಯಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ಕಂಇ-ಎಂಎನ್‌ಎಸ್‌ಎ-581/2021

(ಆರ್ ಅಶೋಕ್)
ಕಂದಾಯ ಸಚಿವರು

ಲಗತ್ತು-01

ಕರ್ನಾಟಕ ಸರ್ಕಾರ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

Despatched
Date...15-6-21

ಸಂಖ್ಯೆ:ಇವಿ(1)-38/20-21

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಕಂದಾಯ ಭವನ, 8ನೇ ಮಹಡಿ,
ಕೆ.ಜಿ.ರಸ್ತೆ, ಬೆಂಗಳೂರು-09,
ದಿನಾಂಕ: 15/6/21

1957ರ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 11ನೇ ನಿಯಮದ ಮೇರೆಗೆ ತಿಳುವಳಿಕೆ ಪತ್ರ.

ಇವರಿಗೆ:
ಶ್ರೀ ವಿಷ್ಣುತೀರ್ಥ,
ಉಪನೋಂದಣಾಧಿಕಾರಿ(ಅಮಾನತ್ತಿನಲ್ಲಿರುವ) ಇವರಿಗೆ
ಜಿಲ್ಲಾ ನೋಂದಣಾಧಿಕಾರಿಗಳು, ಜಿಲ್ಲಾ ನೋಂದಣಿ ಕಛೇರಿ, ಬೆಳಗಾವಿ ರವರ ಮುಖಾಂತರ.

ಶ್ರೀ ವಿಷ್ಣುತೀರ್ಥ, ಉಪನೋಂದಣಾಧಿಕಾರಿ, ಉಪನೋಂದಣಿ ಕಛೇರಿ, ಬೆಳಗಾವಿ ಹಾಲಿ ಅಮಾನತ್ತಿನಲ್ಲಿರುವ ನಿಮ್ಮ ವಿರುದ್ಧ, ನೀವು ಈ ಹಿಂದೆ ಬೆಳಗಾವಿ ಉಪನೋಂದಣಿ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಎಸಗಿದ ಅಪರಾಧಗಳ ಕುರಿತಂತೆ, ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11ರ ಉಪಬಂಧಗಳಿಗನುಗುಣವಾಗಿ ವಿಚಾರಣೆಯನ್ನು ನಡೆಸಲು ಉದ್ದೇಶಿಸಲಾಗಿದೆ, ನಿರ್ದಿಷ್ಟವಾದ ಮತ್ತು ಸ್ಪಷ್ಟವಾದ ದುರ್ನಡತೆಯ ಆರೋಪ, ಆರೋಪಗಳ ವಿವರಣೆ, ಆರೋಪಗಳನ್ನು ಸಾಬೀತುಪಡಿಸಬಲ್ಲ ದಾಖಲೆಗಳ ಮತ್ತು ಸಾಕ್ಷಿದಾರರ ಪಟ್ಟಿಯನ್ನು ಅನುಕ್ರಮವಾಗಿ ಅನುಬಂಧ 1 ರಿಂದ 4 ರವರೆಗಿನ ಅನುಬಂಧಗಳಾಗಿ ಇದಕ್ಕೆ ಲಗತ್ತಿಸಲಾಗಿದೆ.

ನೀವು ಈ ತಿಳುವಳಿಕೆ ಪತ್ರ ಸ್ವೀಕರಿಸಿದ 15 ದಿನಗಳೊಳಗಾಗಿ ಈ ಆರೋಪಗಳ ಬಗ್ಗೆ ನಿಮ್ಮ ರಕ್ಷಣಾ ಹೇಳಿಕೆಯನ್ನು ಲಿಖಿತವಾಗಿ ಈ ಕಛೇರಿಗೆ ತಲುಪುವಂತೆ ಕಳುಹಿಸಲು ಸೂಚಿಸಿದೆ ಹಾಗೂ ನಿಮ್ಮ ಹೇಳಿಕೆಯನ್ನು ಮೌಖಿಕವಾಗಿ ಹೇಳಲು ಬಯಸುತ್ತೀರೋ ಅಥವಾ ಇಲ್ಲವೇ ಎಂಬುದನ್ನು ತಿಳಿಸುವಂತೆಯೂ ಸಹ ಸೂಚಿಸಲಾಗಿದೆ.

ನೀವು ಒಪ್ಪಿಕೊಳ್ಳದೇ ಇರುವ ಆರೋಪಗಳ ಬಗ್ಗೆ ಮಾತ್ರ ವಿಚಾರಣೆ ನಡೆಸಲಾಗುವುದರಿಂದ ನೀವು ಪ್ರತಿಯೊಂದು ಆರೋಪವನ್ನು ಸ್ಪಷ್ಟವಾಗಿ ಒಪ್ಪಿಕೊಳ್ಳಬೇಕು ಇಲ್ಲವೇ ನಿರಾಕರಿಸಬೇಕೆಂದು ತಿಳಿಸಲಾಗಿದೆ. ನಿಗಧಿತ ಸಮಯದೊಳಗೆ ನಿಮ್ಮ ಲಿಖಿತ ರಕ್ಷಣಾ ಹೇಳಿಕೆಯನ್ನು ಸಲ್ಲಿಸದಿದ್ದರೆ ಅಥವಾ ಶಿಸ್ತು ಪ್ರಾಧಿಕಾರದ ಮುಂದೆ ಸ್ವತಃ ಹಾಜರಾಗಿ ಹೇಳಿಕೆಯನ್ನು ಸಲ್ಲಿಸದಿದ್ದರೆ, ಈ ವಿಷಯದಲ್ಲಿ ನೀವು ಹೇಳುವುದು ಏನೂ ಇಲ್ಲವೆಂದು ಮತ್ತು ನೀವು ಆರೋಪಗಳನ್ನು ಒಪ್ಪಿಕೊಂಡಿದ್ದೀರೆಂದು ಪರಿಗಣಿಸಿ, ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957 ರ ನಿಯಮಗಳ ಮೇರೆಗೆ ನಿಮ್ಮ ಮೇಲೆ ಮುಂದಿನ ಕ್ರಮ ಜರುಗಿಸಲಾಗುವುದೆಂದು ನಿಮಗೆ ಈ ಮೂಲಕ ತಿಳಿಸಲಾಗಿದೆ.

KPN 15/6/21
ಶಿಸ್ತು ಪ್ರಾಧಿಕಾರಿ ಹಾಗೂ
ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು
ಬೆಂಗಳೂರು

ಕರ್ನಾಟಕ ಸರ್ಕಾರ
ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಸಂಖ್ಯೆ:ಇವಿ(1)–38/20–21

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಕಂದಾಯ ಭವನ, 8ನೇ ಮಹಡಿ,
ಕೆ.ಜಿ.ರಸ್ತೆ, ಬೆಂಗಳೂರು–09,
ದಿನಾಂಕ: 15/6/21

ಅನುಬಂಧ–1

ಶ್ರೀ ವಿಷ್ಣುತೀರ್ಥ, ಉಪನೋಂದಣಾಧಿಕಾರಿ, ಉಪನೋಂದಣಿ ಕಛೇರಿ, ಬೆಳಗಾವಿ ಹಾಲಿ ಅಮಾನತ್ತಿನಲ್ಲಿರುವ ಇವರ ವಿರುದ್ಧ ಮಾಡಲಾದ ಆರೋಪಣ ಪಟ್ಟಿ.

ಆರೋಪ:

ಶ್ರೀ ವಿಷ್ಣುತೀರ್ಥ, ಹಿಂದಿನ ಉಪನೋಂದಣಾಧಿಕಾರಿ, ಉಪನೋಂದಣಿ ಕಛೇರಿ, ಬೆಳಗಾವಿ ಆದ ನೀವು ಈ ಹಿಂದೆ ಬೆಳಗಾವಿ ಉಪನೋಂದಣಿ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ 2015–16 ನೇ ಸಾಲಿನಲ್ಲಿ ಬೆಳಗಾವಿ ನಗರದ ಕೃಷಿ ಜಮೀನಿಗೆ ಸಂಬಂದಿಸಿದಂತೆ ಹಾಗೂ ಮಹಾಲೇಖಪಾಲರು ಆಕ್ಷೇಪಣೆಯಲ್ಲಿ ತಿಳಿಸಿರುವಂತೆ ಸದರಿ **CTS** ಸ್ವತ್ತುಗಳಿಗೆ 2015–16ನೇ ಸಾಲಿನಲ್ಲಿ ಜಾರಿಯಲ್ಲಿದ್ದ ಮಾರ್ಗಸೂಚಿ ದರ ಪಟ್ಟಿಯಲ್ಲಿನ ದರಗಳನ್ನು ಅಳವಡಿಸದೇ ಇರುವುದನ್ನು ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ ಅದರಂತೆ ಜಿಲ್ಲಾನೋಂದಣಾಧಿಕಾರಿಗಳು ಬೆಳಗಾವಿ ರವರು **CTS** ಸ್ವತ್ತುಗಳಿಗೆ ನಿಗಧಿಪಡಿಸಿದ ದರಗಳು ಅನುಸರಿಸಿ ಕೊರತೆ ಶುಲ್ಕಗಳನ್ನು ವಸೂಲಾಯಿಸಲು ಆದೇಶಿಸಿರುತ್ತಾರೆ. ಆದರೆ ಸದರಿ ದಸ್ತಾವೇಜುಗಳನ್ನು ನೋಂದಾಯಿಸಿದ ಉಪನೋಂದಣಾಧಿಕಾರಿ, ಬೆಳಗಾವಿ ರವರಾದ ಶ್ರೀ ವಿಷ್ಣುತೀರ್ಥ ರವರ ನಿರ್ಲಕ್ಷತೆಯಿಂದ ಸದರಿ ದರಗಳನ್ನು ಅನುಸರಿಸದೇ, ಉದ್ದೇಶಪೂರ್ವಕವಾಗಿ ದುರುದ್ದೇಶದಿಂದ ಅಭಿವೃದ್ಧಿಹೊಂದದ ಭೂ ಪರಿವರ್ತಿತ ಜಮೀನಿನ ದರಗಳನ್ನು ಅನುಸರಿಸಿ ಸದರಿ ಸ್ವತ್ತುಗಳನ್ನು ಅಪಮೌಲ್ಯಗೊಳಿಸಿ ನೋಂದಾಯಿಸಿರುವುದರಿಂದ ಸರ್ಕಾರಕ್ಕೆ ರೂ.12,91,70,763/– ಗಳಷ್ಟು ರಾಜಸ್ವ ನಷ್ಟ ಉಂಟುಮಾಡಿರುತ್ತಾರೆ. ಇದು ನಿಮ್ಮ ಕರ್ತವ್ಯಲೋಪ, ಬೇಜವಾಬ್ದಾರಿತನ, ನಿರ್ಲಕ್ಷ್ಯತೆ ಹಾಗೂ ದುರ್ನಡತೆಯನ್ನು ತೋರ್ಪಡಿಸುತ್ತದೆ. ಇದು ಸರ್ಕಾರಿ ನೌಕರರಿಗೆ ತಕ್ಕುದಲ್ಲವಾಗಿರುತ್ತದೆ. ಇದರಿಂದಾಗಿ ನೀವು ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮಗಳು 1966 ರ ನಿಯಮ 3 ಅನ್ನು ಉಲ್ಲಂಘಿಸಿ ಕೆ.ಸಿ.ಎಸ್(ಸಿ.ಸಿ.ಎ) ನಿಯಮಾವಳಿ 1957ರ ನಿಯಮದಡಿಯಲ್ಲಿ ಶಿಸ್ತು ಕ್ರಮಕ್ಕೆ ಗುರಿಯಾಗಿತ್ತೀರಿ.

15/6/21

ಶಿಸ್ತು ಪ್ರಾಧಿಕಾರಿ ಹಾಗೂ
ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು
ಬೆಂಗಳೂರು

ಕರ್ನಾಟಕ ಸರ್ಕಾರ
ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಸಂಖ್ಯೆ:ಇವಿ(1)–38/20–21

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಕಂದಾಯ ಭವನ, 8ನೇ ಮಹಡಿ,
ಕೆ.ಜಿ.ರಸ್ತೆ, ಬೆಂಗಳೂರು–09,
ದಿನಾಂಕ: 15/6/21

ಅನುಬಂಧ–2

ಶ್ರೀ ವಿಷ್ಣುತೀರ್ಥ, ಉಪನೋಂದಣಾಧಿಕಾರಿ, ಉಪನೋಂದಣಿ ಕಛೇರಿ, ಬೆಳಗಾವಿ ಹಾಲಿ ಅಮಾನತ್ತಿನಲ್ಲಿರುವ ಇವರ ವಿರುದ್ಧ ಮಾಡಲಾದ ಆರೋಪಣ ಪಟ್ಟಿಯನ್ನು ಸಮರ್ಥಿಸುವ ವಿವರಣೆ.

ಮಹಾಲೇಖಪಾಲರು, ಬೆಂಗಳೂರುರವರು 2018–19ನೇ ಸಾಲಿನಲ್ಲಿ ಬೆಳಗಾವಿ ಉಪನೋಂದಣಿ ಕಛೇರಿಯನ್ನು ತಪಾಸಣೆ ನಡೆಸಿ ಕಂಡಿಕೆ ಸಂಖ್ಯೆ: I/II/A/2015-18 ರಲ್ಲಿ 9 ದಸ್ತಾವೇಜುಗಳಿಂದ ರೂ 1299.12 ಲಕ್ಷಗಳು ಕೊರತೆ ಉಂಟಾಗಿರುವುದೆಂದು ಆಕ್ಷೇಪಿಸಿದ್ದು, ಸದರಿ ಆಕ್ಷೇಪಣೆ ಈ ಕೆಳಕಂಡಂತಿದೆ:

"Short-levy of SD and RF due to suppression of facts. Sub-registrar office Belagavi in april 2018, audit noted that in nine sale deeds the vendors and assigners had jointly agreed to convey their undivided share in the schedule property. However, facts determining the rate of SD and RF such as existence of building, actual uses of property, exact location of the property, etc., where neither brought out by the parties to the document nor considered by the sub-registrar. The sub-registrar, will computing the market value of the property had adopted rate applicable for agricultural land (Belagavi Rural) instead of specific rate assigned to the said CTS numbers in the CVC guideline value. Further, the schedule property bearing CTS Nos.3928, 3929, 3929/1, 3929/2 & 3929/5 is situated within the City Corporation limits of Belagavi, abutting National Highway.

a) The registering officers concerned also didn't examine the information available at their disposal like khata, tax paid receipts, etc., to detect such suppression and tpo determine the proper market value. This resulted in short-levy of Stamp Duty and Registration Fee amounting Rs.12.99 crores.

ಸದರಿ ಆಕ್ಷೇಪಣೆಗೆ ಸಂಬಂದಿಸಿದಂತೆ ಜಿಲ್ಲಾ ನೋಂದಣಾಧಿಕಾರಿಗಳು, ಬೆಳಗಾವಿ ರವರಿಗೆ ಅನುವರ್ತನ ವರದಿ ಸಲ್ಲಿಸಲು ಹಾಗೂ ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 46–ಎ ಮತ್ತು ನೋಂದಣಿ ಕಾಯ್ದೆ 1908ರ ಕಲಂ 80–ಎ ರಡಿ ಕೊರತೆ ಶುಲ್ಕಗಳನ್ನು ಸಂಬಂದಪಟ್ಟ ಪಕ್ಷಾಕಾರರಿಂದ ವಸೂಲಾಯಿಸಲು ಆದೇಶಿಸಲಾಗಿತ್ತು. ಜಿಲ್ಲಾ ನೋಂದಣಾಧಿಕಾರಿಗಳು, ಬೆಳಗಾವಿ ರವರು ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 46–ಎ ಮತ್ತು ನೋಂದಣಿ ಕಾಯ್ದೆ 1908ರ ಕಲಂ 80–ಎ ರಡಿ ಕೊರತೆ ಮುದ್ರಾಂಕ ಶುಲ್ಕ ರೂ.12,78,79,056/–ಗಳನ್ನು ಹಾಗೂ ನೋಂದಣಿ ಶುಲ್ಕ ರೂ.12,91,707/–ಗಳನ್ನು ಒಟ್ಟು ರೂ.12,91,70,763/–ಗಳನ್ನು ವಸೂಲಾಯಿಸಲು ಸಂಬಂದಪಟ್ಟ ಪಕ್ಷಕಾರರಿಗೆ ಆದೇಶಿಸಿರುತ್ತಾರೆ.

<u>ಆರೋಪ:</u>

ಶ್ರೀ. ವಿಷ್ಣುತೀರ್ಥ, ಹಿಂದಿನ ಉಪನೋಂದಣಾಧಿಕಾರಿ, ಉಪನೋಂದಣಿ ಕಛೇರಿ ಬೆಳಗಾವಿ ಹಾಲಿ ಅಮಾನತ್ತಿನಲ್ಲಿರುವ ಇವರು ಹಿಂದೆ ಬೆಳಗಾವಿ ಉಪನೋಂದಣಿ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ 2015-16 ನೇ ಸಾಲಿನಲ್ಲಿ ಬೆಳಗಾವಿ ನಗರದ ಕೃಷಿ ಜಮೀನಿಗೆ ಸಂಬಂದಿಸಿದಂತೆ ಹಾಗೂ ಮಹಾಲೇಖಪಾಲರು ಆಕ್ಷೇಪಣೆಯಲ್ಲಿ ತಿಳಿಸಿರುವಂತೆ ಸದರಿ CTS ಸ್ವತ್ತುಗಳಿಗೆ 2015-16ನೇ ಸಾಲಿನಲ್ಲಿ ಜಾರಿಯಲ್ಲಿದ್ದ ಮಾರ್ಗಸೂಚಿ ದರ ಪಟ್ಟಿಯಲ್ಲಿನ ದರಗಳನ್ನು ಅಳವಡಿಸದೇ ಇರುವುದನ್ನು ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ ಅದರಂತೆ ಜಿಲ್ಲಾನೋಂದಣಾಧಿಕಾರಿಗಳು ಬೆಳಗಾವಿ ರವರು CTS ಸ್ವತ್ತುಗಳಿಗೆ ನಿಗಧಿಪಡಿಸಿದ ದರಗಳು ಅನುಸರಿಸಿ ಕೊರತೆ ಶುಲ್ಕಗಳನ್ನು ವಸೂಲಾಯಿಸಲು ಆದೇಶಿಸಿರುತ್ತಾರೆ. ಆದರೆ ಸದರಿ ದಸ್ತಾವೇಜುಗಳನ್ನು ನೋಂದಾಯಿಸಿದ ಉಪನೋಂದಣಾಧಿಕಾರಿ, ಬೆಳಗಾವಿ ರವರಾದ ಶ್ರೀ ವಿಷ್ಣುತೀರ್ಥ ರವರ ನಿರ್ಲಕ್ಷತೆಯಿಂದ ಸದರಿ ದರಗಳನ್ನು ಅನುಸರಿಸದೇ, ಉದ್ದೇಶಪೂರ್ವಕವಾಗಿ ದುರುದ್ದೇಶದಿಂದ ಅಭಿವೃದ್ಧಿಹೊಂದದ ಭೂ ಪರಿವರ್ತಿತ ಜಮೀನಿನ ದರಗಳನ್ನು ಅನುಸರಿಸಿ ಸದರಿ ಸ್ವತ್ತುಗಳನ್ನು ಅಪಮೌಲ್ಯಗೊಳಿಸಿ ನೋಂದಾಯಿಸಿರುವುದರಿಂದ ಸರ್ಕಾರಕ್ಕೆ ರೂ.12,91,70,763/- ಗಳಷ್ಟು ರಾಜಸ್ವ ನಷ್ಟ ಉಂಟುಮಾಡಿರುತ್ತಾರೆ. ಇದು ನಿಮ್ಮ ಕರ್ತವ್ಯಲೋಪ, ಬೇಜವಾಬ್ದಾರಿತನ, ನಿರ್ಲಕ್ಷ್ಯತೆ ಹಾಗೂ ದುರ್ನಡತೆಯನ್ನು ತೋರ್ಪಡಿಸುತ್ತದೆ. ಇದು ಸರ್ಕಾರಿ ನೌಕರರಿಗೆ ತಕ್ಕುದಲ್ಲವಾಗಿರುತ್ತದೆ. ಇದರಿಂದಾಗಿ ನೀವು ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮಗಳು 1966 ರ ನಿಯಮ 3 ಅನ್ನು ಉಲ್ಲಂಘಿಸಿ ಕೆ.ಸಿ.ಎಸ್(ಸಿ.ಸಿ.ಎ) ನಿಯಮಾವಳಿ 1957ರ ನಿಯಮದಡಿಯಲ್ಲಿ ಶಿಸ್ತು ಕ್ರಮಕ್ಕೆ ಗುರಿಯಾಗಿರುತ್ತಾರೆ.

15/6/21
ಶಿಸ್ತು ಪ್ರಾಧಿಕಾರಿ ಹಾಗೂ
ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು
ಬೆಂಗಳೂರು

ಕರ್ನಾಟಕ ಸರ್ಕಾರ
ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಸಂಖ್ಯೆ:ಇವಿ(1)–38/20–21

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಕಂದಾಯ ಭವನ, 8ನೇ ಮಹಡಿ,
ಕೆ.ಜಿ.ರಸ್ತೆ, ಬೆಂಗಳೂರು–09,
ದಿನಾಂಕ: 15/6/21

ಅನುಬಂಧ–3

ಶ್ರೀ ವಿಷ್ಣುತೀರ್ಥ, ಉಪನೋಂದಣಾಧಿಕಾರಿ, ಉಪನೋಂದಣಿ ಕಛೇರಿ, ಬೆಳಗಾವಿ ಹಾಲಿ ಅಮಾನತ್ತಿನಲ್ಲಿರುವ ಇವರ ಮೇಲಿನ ಆರೋಪಗಳನ್ನು ಸಮರ್ಥಿಸುವ ದಾಖಲೆಗಳ ಪಟ್ಟಿ.

1. ಮಹಾಲೇಖಪಾಲರು, ಬೆಂಗಳೂರು ರವರ ಪತ್ರ ಸಂಖ್ಯೆ: AG(E & RSA)/RS II/SD&RF/B/DC-01/2018-19/187, ದಿ:09/01/2019
2. ಈ ಕಛೇರಿಯ ಪತ್ರ ಸಂಖ್ಯೆ: AUD/39/2018-19/DC- 01/18-19, ದಿನಾಂಕ:16–01–2019
3. ಜಿಲ್ಲಾ ನೋಂದಣಾಧಿಕಾರಿಗಳು, ಜಿಲ್ಲಾ ನೋಂದಣಿ ಕಛೇರಿ, ಬೆಳಗಾವಿ ರವರ ಪತ್ರ ಸಂಖ್ಯೆ:ಎಯುಡಿ/ಬಿಜಿಎಂ/01/2018–19 ದಿನಾಂಕ:14–05–2019
4. ಜಿಲ್ಲಾ ನೋಂದಣಾಧಿಕಾರಿಗಳು, ಜಿಲ್ಲಾ ನೋಂದಣಿ ಕಛೇರಿ, ಬೆಳಗಾವಿ ರವರ ಪತ್ರ ಸಂಖ್ಯೆ:ಎಯುಡಿ/46–ಎ&80–ಎ/3699ರಿಂದ3721/2020–21 ದಿನಾಂಕ:25–11–2020
5. ಈ ಕಛೇರಿಯ ಕಾರಣ ಕೇಳುವ ನೋಟೀಸ್‌ನ ಪತ್ರ ಸಂಖ್ಯೆ: AUD/39/2018-19/DC-01/18-19, ದಿನಾಂಕ:30–01–2021
6. ಶ್ರೀ ವಿಷ್ಣುತೀರ್ಥ, ಉಪನೋಂದಣಾಧಿಕಾರಿರವರ ಲಿಖಿತ ಹೇಳಿಕೆ ದಿನಾಂಕ:12–02–2021

KP — 15/6/21
ಶಿಸ್ತು ಪ್ರಾಧಿಕಾರಿ ಹಾಗೂ
ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು
ಬೆಂಗಳೂರು

ಅನುಬಂಧ-02

ಕರ್ನಾಟಕ ಸರ್ಕಾರ
ನೋಂದಣಿ ಮತ್ತು ಮುದ್ರಾಂಕ ಇಲಾಖೆ

ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಕಂದಾಯ ಭವನ, 8ನೇ ಮಹಡಿ, ಕೆ.ಜಿ.ರಸ್ತೆ, ಬೆಂಗಳೂರು-09 ರವರ ನಡವಳಿ:

ವಿಷಯ: ಶ್ರೀ ವಿಷ್ಣುತೀರ್ಥ, ಉಪನೋಂದಣಾಧಿಕಾರಿ, ಉಪನೋಂದಣಿ ಕಛೇರಿ, ಬೆಳಗಾವಿ ಇವರು ಸರ್ಕಾರಕ್ಕೆ ರಾಜಸ್ವ ನಷ್ಟವುಂಟುಮಾಡಿರುವುದರಿಂದ ಸದರಿಯವರನ್ನು ಅಮಾನತ್ತಿನಲ್ಲಿಡುವ ಕುರಿತು.

ಉಲ್ಲೇಖ: 1. ಮಹಾಲೇಖಪಾಲರು, ಬೆಂಗಳೂರು ರವರ ಪತ್ರ ಸಂಖ್ಯೆ: AG(E & RSA)/RS II/SD&RF/B/DC-01/2018-19/187, ದಿ:09/01/2019
2. ಈ ಕಛೇರಿಯ ಪತ್ರ ಸಂಖ್ಯೆ: AUD/39/2018-19/DC- 01/18-19, ದಿನಾಂಕ:16-01-2019
3. ಜಿಲ್ಲಾ ನೋಂದಣಾಧಿಕಾರಿಗಳು, ಜಿಲ್ಲಾ ನೋಂದಣಿ ಕಛೇರಿ, ಬೆಳಗಾವಿ ರವರ ಪತ್ರ ಸಂಖ್ಯೆ:ಎಯುಡಿ/ಬಿಜಿಎಂ/01/2018-19 ದಿನಾಂಕ:14-05-2019
4. ಈ ಕಛೇರಿಯ ಕಾರಣ ಕೇಳುವ ನೋಟೀಸ್‌ನ ಪತ್ರ ಸಂಖ್ಯೆ: AUD/39/2018-19/DC-01/18-19, ದಿನಾಂಕ:30-01-2021
5. ಶ್ರೀ ವಿಷ್ಣುತೀರ್ಥ, ಉಪನೋಂದಣಾಧಿಕಾರಿರವರ ಲಿಖಿತ ಹೇಳಿಕೆ ದಿನಾಂಕ:12-02-2021

****

ಪ್ರಸ್ತಾವನೆ:-

ಪ್ರಸ್ತಾವಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಲ್ಲಿ ಮಹಾಲೇಖಪಾಲರು, ಬೆಂಗಳೂರುರವರು 2018-19ನೇ ಸಾಲಿನಲ್ಲಿ ಬೆಳಗಾವಿ ಉಪನೋಂದಣಿ ಕಛೇರಿಯನ್ನು ತಪಾಸಣೆ ನಡೆಸಿ ಕಂಡಿಕೆ ಸಂಖ್ಯೆ: I/II/A/2015-18 ರಲ್ಲಿ 9 ದಸ್ತಾವೇಜುಗಳಿಂದ ರೂ 1299.12 ಲಕ್ಷಗಳು ಕೊರತೆ ಉಂಟಾಗಿರುವುದೆಂದು ಆಕ್ಷೇಪಿಸಿದ್ದು, ಸದರಿ ಆಕ್ಷೇಪಣೆ ಈ ಕೆಳಕಂಡಂತಿದೆ:

"Short-levy of SD and RF due to suppression of facts. Sub-registrar office Belagavi in april 2018, audit noted that in nine sale deeds the vendors and assigners had jointly agreed to convey their undivided share in the schedule property. However, facts determining the rate of SD and RF such as existence of building, actual uses of property, exact location of the property, etc., where neither brought out by the parties to the document nor considered by the sub-registrar. The sub-registrar, will computing the market value of the property had adopted rate applicable for agricultural land (Belagavi Rural) instead of specific rate assigned to the said CTS numbers in the CVC guideline value. Further, the schedule property bearing CTS Nos.3928, 3929, 3929/1, 3929/2 & 3929/5 is situated within the City Corporation limits of Belagavi, abutting National Highway.

a) The registering officers concerned also didn't examine the information available at their disposal like khata, tax paid receipts, etc., to detect such suppression and tpo determine the proper market value. This resulted in short-levy of Stamp Duty and Registration Fee amounting Rs.12.99 crores.

ಸದರಿ ಆಕ್ಷೇಪಣೆಗೆ ಸಂಬಂದಿಸಿದಂತೆ ಉಲ್ಲೇಖ(2) ರಲ್ಲಿ ಜಿಲ್ಲಾ ನೋಂದಣಾಧಿಕಾರಿಗಳು, ಬೆಳಗಾವಿ ರವರಿಗೆ ಅನುವರ್ತನ ವರದಿ ಸಲ್ಲಿಸಲು ಹಾಗೂ ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 46-ಎ ಮತ್ತು ನೋಂದಣಿ ಕಾಯ್ದೆ 1908ರ ಕಲಂ 80-ಎ ರಡಿ ಕೊರತೆ ಶುಲ್ಕಗಳನ್ನು ಸಂಬಂದಪಟ್ಟ ಪಕ್ಷಾಕಾರರಿಂದ ವಸೂಲಾಯಿಸಲು ಆದೇಶಿಸಲಾಗಿತ್ತು.

ಉಲ್ಲೇಖ (3)ರನ್ವಯ ಜಿಲ್ಲಾ ನೋಂದಣಾಧಿಕಾರಿಗಳು, ಬೆಳಗಾವಿ ರವರು ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 46-ಎ ಮತ್ತು ನೋಂದಣಿ ಕಾಯ್ದೆ 1908ರ ಕಲಂ 80-ಎ ರಡಿ ಕೊರತೆ ಮುದ್ರಾಂಕ ಶುಲ್ಕ ರೂ.12,78,79,056/-ಗಳನ್ನು ಹಾಗೂ ನೋಂದಣಿ ಶುಲ್ಕ ರೂ.12,91,707/-ಗಳನ್ನು ಒಟ್ಟು ರೂ.12,91,70,763/-ಗಳನ್ನು ವಸೂಲಾಯಿಸಲು ಸಂಬಂದಪಟ್ಟ ಪಕ್ಷಕಾರರಿಗೆ ಆದೇಶಿಸಿರುತ್ತಾರೆ.

ಉಲ್ಲೇಖ (4) ರನ್ವಯ ಶ್ರೀ ವಿಷ್ಣುತೀರ್ಥ, ಉಪನೋಂದಣಾಧಿಕಾರಿ, ಬೆಳಗಾವಿ ರವರಿಗೆ ಕರ್ನಾಟಕ ನೋಂದಣಿ ನಿಯಮ 1965ರ ನಿಯಮ 170ರಡಿ ಕೊರತೆ ಮೊತ್ತವನ್ನು ನಿಮ್ಮಿಂದ ಏಕೆ ವಸೂಲು ಮಾಡಬಾರದು ಹಾಗೂ ನಿಮ್ಮನ್ನು ಏಕೆ ಸೇವೆಯಿಂದ ಅಮಾನತ್ತುಗೊಳಿಸಬಾರದು ಎಂಬುದರ ಬಗ್ಗೆ ಸಮಜಾಯಿಷಿ ನೀಡುವಂತೆ ಕಾರಣ ಕೇಳುವ ನೋಟೀಸ್ ಜಾರಿಗೊಳಿಸಲಾಗಿತ್ತು.

ಸದರಿ ಕಾರಣ ಕೇಳುವ ನೋಟೀಸ್‌ಗೆ ಉಲ್ಲೇಖ (5) ರಲ್ಲಿ ಸದರಿಯವರು ದಸ್ತಾವೇಜುಗಳನ್ನು ನೋಂದಾಯಿಸುವ ವೇಳೆ ಅಪಮೌಲ್ಯಗೊಳಿಸಿರುವುದಿಲ್ಲವೆಂದು ಹಾಗೂ 2015-16 ನೇ ಸಾಲಿನಲ್ಲಿ ಜಾರಿಯಲ್ಲಿದ್ದ ಮಾರ್ಗಸೂಚಿ ದರವನ್ನು ಅಳವಡಿಸಿ ದಸ್ತಾವೇಜನ್ನು ನೋಂದಾಯಿಸಲಾಗಿದೆ. ಬೆಳಗಾವಿ ನಗರದ ಕೃಷಿ ಜಮೀನಿನ ಮೌಲ್ಯ ಪ್ರತಿ ಎಕರೆಗೆ ರೂ.26,84,000/- ಇದ್ದುದ್ದನ್ನು ವಾಣಿಜ್ಯ ಉದ್ದೇಶಕ್ಕೆ ಶೇ.75 ರಷ್ಟು ಹೆಚ್ಚಿಸಿ ರೂ. 46,97,000/- ಆಗಿರುತ್ತದೆ. ಈ ರೀತಿ ಸದರಿ ಸ್ವತ್ತಿಗೆ ಬೆಲೆ ನಿಗಧಿಪಡಿಸಿ ರೂ.12,58,80,000/- ಆಗುತ್ತದೆ, ಆದರೆ ದಸ್ತಾವೇಜುಗಳ ಮೌಲ್ಯವನ್ನು ರೂ. 77.00 ಕೋಟಿಗಳಾಗುತ್ತದೆ ಎಂದು ತಿಳಿಸುತ್ತಾ, ದಸ್ತಾವೇಜಿನಲ್ಲಿನ ವಿವರಣೆಗೆ ಸಂಬಂಧಿಸಿದಂತೆ ಮಾತ್ರ ಮೌಲ್ಯವನ್ನು ಉಪನೋಂದಣಾಧಿಕಾರಿಗಳನ್ನು ನಿರ್ಧರಿಸಬೇಕಾಗುತ್ತದೆ. ದಸ್ತಾವೇಜಿನಲ್ಲಿನ ವಿಷಯಗಳನ್ನು ಹೊರತುಪಡಿಸಿ ದಸ್ತಾವೇಜಿನ ವಿಷಯಗಳನ್ನು ಪರಿಗಣಿಸುವಂತಿಲ್ಲ ಎಂದು ನೀಡಿರುವ ಲಿಖಿತ ಹೇಳಿಕೆಯನ್ನು ಒಪ್ಪಲು ಬರುವುದಿಲ್ಲ.

ಮಹಾಲೇಖಪಾಲರು ಆಕ್ಷೇಪಣೆಯಲ್ಲಿ ತಿಳಿಸಿರುವಂತೆ ಸದರಿ ಸ್ವತ್ತಿಗೆ CTS No. ನಮೂದಿಸಿರುವುದರಿಂದ ಸದರಿ CTS ಸ್ವತ್ತುಗಳಿಗೆ ಮಾರ್ಗಸೂಚಿ ದರ ಪಟ್ಟಿಯಲ್ಲಿನ ದರಗಳನ್ನು ಅಳವಡಿಸದೇ ಇರುವುದನ್ನು ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ ಅದರಂತೆ ಜಿಲ್ಲಾನೋಂದಣಾಧಿಕಾರಿಗಳು ಬೆಳಗಾವಿ ರವರು CTS ಸ್ವತ್ತುಗಳಿಗೆ ನಿಗಧಿಪಡಿಸಿದ ದರಗಳು ಅನುಸರಿಸಿ ಕೊರತೆ ಶುಲ್ಕಗಳನ್ನು ವಸೂಲಾಯಿಸಲು ಆದೇಶಿಸಿರುತ್ತಾರೆ. ಆದರೆ ಸದರಿ ದಸ್ತಾವೇಜುಗಳನ್ನು ನೋಂದಾಯಿಸಿದ ಉಪನೋಂದಣಾಧಿಕಾರಿ, ಬೆಳಗಾವಿ ರವರಾದ ಶ್ರೀ ವಿಷ್ಣುತೀರ್ಥ ರವರ ನಿರ್ಲಕ್ಷತೆಯಿಂದ ಸದರಿ ದರಗಳನ್ನು ಅನುಸರಿಸದೇ, ಉದ್ದೇಶಪೂರ್ವಕವಾಗಿ ದುರುದ್ದೇಶದಿಂದ ಅಭಿವೃದ್ಧಿಹೊಂದದ ಭೂ ಪರಿವರ್ತಿತ ಜಮೀನಿನ ದರಗಳನ್ನು ಅನುಸರಿಸಿ ಸದರಿ ಸ್ವತ್ತುಗಳನ್ನು ಅಪಮೌಲ್ಯಗೊಳಿಸಿ ನೋಂದಾಯಿಸಿರುವುದರಿಂದ ಸರ್ಕಾರಕ್ಕೆ ರೂ.12,91,70,763/- ಗಳಷ್ಟು ರಾಜಸ್ವ ನಷ್ಟ ಉಂಟುಮಾಡಿರುತ್ತಾರೆ. ಆದ್ದರಿಂದ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತ್ತಿನಲ್ಲಿಡುವುದು ಸಮಂಜಸವೆಂದು ಮನಗಂಡು ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಆದೇಶ

ಸಂಖ್ಯೆ:ಇವಿ(1)-38/2020-21

ದಿನಾಂಕ: 24-03-2021

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 10(1)(ಡಿ) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೆ.ಪಿ.ಮೋಹನ್ ರಾಜ್ ಭಾ.ಆ.ಸೇ., ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಆದ ನಾನು ಶ್ರೀ ವಿಷ್ಣುತೀರ್ಥ, ಉಪನೋಂದಣಾಧಿಕಾರಿ, ಉಪನೋಂದಣಿ ಕಛೇರಿ, ಬೆಳಗಾವಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಅಮಾನತ್ತಿನಲ್ಲಿಟ್ಟಿರುತ್ತೇನೆ.

ಶ್ರೀ ವಿಷ್ಣುತೀರ್ಥ, ಉಪನೋಂದಣಾಧಿಕಾರಿ, ಉಪನೋಂದಣಿ ಕಛೇರಿ, ಬೆಳಗಾವಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇವರು ಅಮಾನತ್ತಿನ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿಯನ್ನು ಪಡೆಯದೇ ಕೇಂದ್ರ ಸ್ಥಾನವನ್ನು ಬಿಡತಕ್ಕದ್ದಲ್ಲ. ಅಮಾನತ್ತಿನ ಅವಧಿಯಲ್ಲಿ ಸದರಿಯವರು ನಿಯಮಾನುಸಾರ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.

24/3/21

ಶಿಸ್ತು ಪ್ರಾಧಿಕಾರಿ
ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು,
ಬೆಂಗಳೂರು.

ಪ್ರತಿಯನ್ನು:

1. ಸರ್ಕಾರದ ಕಾರ್ಯದರ್ಶಿಗಳು, ಕಂದಾಯ ಇಲಾಖೆ(ನೋಂದಣಿ), ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಗೌರವ ಪೂರ್ವಕವಾಗಿ ಸಲ್ಲಿಸಿದೆ.
2. ಜಿಲ್ಲಾ ನೋಂದಣಾಧಿಕಾರಿ, ಜಿಲ್ಲಾ ನೋಂದಣಿ ಕಛೇರಿ, ಬೆಳಗಾವಿ ಇವರು ಶ್ರೀ ವಿಷ್ಣುತೀರ್ಥ, ಉಪನೋಂದಣಾಧಿಕಾರಿ, ಉಪನೋಂದಣಿ ಕಛೇರಿ, ಬೆಳಗಾವಿ ಉಪನೋಂದಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಇವರಿಗೆ ಈ ಅಮಾನತ್ತಿನ ಆದೇಶವನ್ನು ಜಾರಿ ಮಾಡಿ ಸ್ವೀಕೃತಿ ಪಡೆದು ವರದಿಯನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.
3. ಉಪನೋಂದಣಾಧಿಕಾರಿಗಳು, ಉಪನೋಂದಣಿ ಕಛೇರಿ, ಬೆಳಗಾವಿ.
4. ಕೇಂದ್ರ ಕಛೇರಿಯ ಸಿಬ್ಬಂದಿ 2 ಶಾಖೆಗೆ ಮಾಹಿತಿಗಾಗಿ.
5. ಕಛೇರಿ ಪ್ರತಿ.

By RPAD

ಅನುಬಂಧ - 03

ಜಿಲ್ಲಾ ನೋಂದಣಾಧಿಕಾರಿಗಳು ಹಾಗೂ ಮುದ್ರಾಂಕಗಳ ಉಪ ಆಯುಕ್ತರವರ ನ್ಯಾಯಾಲಯ, ಬೆಳಗಾವಿ, ಜಿಲ್ಲಾ:ಬೆಳಗಾವಿ ಇವರ ನಡಾವಳಿಗಳು.

ಡಿ.ಸಿ.ಕಂಪೌಂಡ್ ಬೆಳಗಾವಿ ,ಜಿಲ್ಲಾ ಬೆಳಗಾವಿ – 590 001.

ಉಪಸ್ಥಿತರು : **ಶ್ರೀ ಮಹಾಂತೇಶ ಪಟಾತರ**
ಜಿಲ್ಲಾ ನೋಂದಣಾಧಿಕಾರಿಗಳು
ಹಾಗೂ ಮುದ್ರಾಂಕಗಳ ಉಪ ಆಯುಕ್ತರು
ಬೆಳಗಾವಿ

ವಾದಿಗಳು:

ಉಪ–ನೋಂದಣಿ ಅಧಿಕಾರಿ
ಬೆಳಗಾವಿ

ಪ್ರತಿವಾದಿಗಳು:

1)ಶ್ರೀ ಹರ್ಷಾ ಬಾಬು ದಮ್ಮಣಗಿ
ಮ್ಯಾನೇಜಿಂಗ್ ಡೈರೆಕ್ಟರ್, ದಮ್ಮಣಗಿ ಆಂಡ್ ಸಾನು ಡೆವಲಪ್ಪರ್ಸ ಪ್ರೈವೇಟ ಲಿಮಿಟೆಡ್, ನಂ: 137, ರೈಲ್ವೆ ಪ್ಯಾರಲಲ್ ರೋಡ, ಕುಮಾರ ಪಾರ್ಕ ವೆಸ್ಟ, ಬೆಂಗಳೂರು–560020.

2) ಬಾಬು ಅಡಿವೆಪ್ಪ ದಮ್ಮಣಗಿ
ಚೇರಮನ್, ದಮ್ಮಣಗಿ ಆಂಡ್ ಸಾನು ಡೆವಲಪ್ಪರ್ಸ ಪ್ರೈವೇಟ ಲಿಮಿಟೆಡ್, ನಂ: 137, ರೈಲ್ವೆ ಪ್ಯಾರಲಲ್ ರೋಡ, ಕುಮಾರ ಪಾರ್ಕ ವೆಸ್ಟ, ಬೆಂಗಳೂರು–560020.

ಪ್ರಸ್ತಾವನೆ:

ಪ್ರಸ್ತಾವಿತ ವಿಷಯಕ್ಕೆ ಸಂಬಂಧಿಸಿದಂತೆ ಮಹಾಲೇಖಪಾಲರು ಬೆಂಗಳೂರು ಇವರು ಬೆಳಗಾವಿ ಉಪ–ನೋಂದಣಿ ಕಛೇರಿಯನ್ನು ದಿನಾಂಕ: 2015–18 ರ ಅವಧಿಗೆ ತಪಾಸಣೆಯನ್ನು ಕೈಗೊಂಡು ಸದರ ಆಡಿಟ್ ತಪಾಸಣಾ ವರದಿಯಲ್ಲಿ ಈ ಕೆಳಕಂಡ ದಸ್ತಾವೇಜಿನ ಖರೀದಿ ಪತ್ರದಲ್ಲಿ ಒಳಗೊಂಡ ಆಸ್ತಿಯ ಮೌಲ್ಯವು ಅಪಮೌಲ್ಯವಾಗಿರುವುದರಿಂದ ಮುದ್ರಾಂಕ ಶುಲ್ಕ ಹಾಗೂ ನೋಂದಣಿ ಫೀ ಗಳಲ್ಲಿ ರಾಜಸ್ವದ ನಷ್ಟ ಉಂಟಾಗಿರುತ್ತದೆ ಎಂದು ಆಕ್ಷೇಪಣೆ ತೆಗೆದಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ During the review of the registered sale deed and other connected records for the years 2015-18, it was observed that, vide sale deed document numbers 3699/15-16, 3727/15-16, 3728/15-16, 3730/15-16, 3706/15-16, 3718/15-16, 3723/15-16, 3747/15-16 and 3721/15-16, an extent of 98930.58 square meters property bearing CTS Nos: 3928, 3929, 3929/1, 3929/2 and 3939/5 situated within the local limits of City Corporation, Belagavi, held by the joint owners shri Shashishekhar and others (vendors), conveyed their undivided interest/share/rights in the schedule property to M/s Dhammanagi & Sanu Developers Pvt Ltd (Purchaser)

On review of above said sale deed documents and enclose attached the documents, it was observed that property in question is situated within Belagavi Corporation Limits abutting Old Poona Bangalore National Highway and a 106541 sq.ft Residential/Commercial Building constructed upon the schedule property. It is clearly evident from the above said documents/ enclosure attached to the documents that the said property is a fully developed property

In CVC guideline though specific rate has been assigned for the above said CTS Numbers (vide a specific Entry No. 133 to CVC 2014-15 effective from 01-12-2014) the Department/SRO while assessing the market value of the property had adopted Agricultural Land rate (rate applicable for villages situated at Belagavi Rural) instead of adopting specific rate fixed for the said CTS Numbers by the CVC. Further, it was noticed that the parties have suppressed existence of building in schedule property while executing the sale deed. Due to incorrect assessment of market vale and suppression of facts of said property resulted in undervaluation of the property and consequent short levy of Stamp Duty and Registration Fee amounting to Rs. 12.92 crore as detailed below. ಅಂತಾ ಆಕ್ಷೇಪಣೆ ಇರುತ್ತದೆ.

Sl No	Doc. No	Share in Land Conveyed (in percentage)	Extent conveyed in square meters	Rate per square meter	Value of the property	SD & RF leviable	SD & RF levied	Short levy of SD & RF
1	3699/15-16	71.6875	77748	24794 (10% enhanced for two side roads)	1927683912	127227138	37091603	90135535
2	3727/15-16	12	13015		322693910	21297798	6098400	15199398
3	3728/15-16	3.140625	3406		84448364	5773592	1596076	3977516
4	3730/15-16	2.859375	3099		76836606	5071215	1453182	3618033
5	3706/15-16	1.40625	1523.13		37814073	2495728	714980	1042546
6	3718/15-16	4.6875	5084		126052696	8319477	2382205	5937272
7	3723/15-16	0.46875	508.37		12604526	831898	238254	593644
8	3747/15-16	0.75	813.40		20167440	1331051	381150	949901
9	3721/15-16	3	3254		80679676	5324858	1524600	3800258
10	Building 106541 sq.ft X Rs. 557 per sq.ft (On the schedule property Building with RCC/Tiles were constructed. Hence, least rate Madras Terrace has been adopted.				59343337	3916660	0	3916660
								129170763

ಈ ಮೇಲ್ಕಂಡಂತೆ ನೋಂದಾದ ಖರೀದಿ ಪತ್ರಗಳಿಗೆ ಮಾರುಕಟ್ಟೆ ಬೆಲೆಯನ್ನು ಮರೆಮಾಚಿ ಸರ್ಕಾರಕ್ಕೆ ನ್ಯಾಯಯುತವಾಗಿ ಬರತಕ್ಕ ರಾಜಸ್ವ ನಷ್ಟ ಉಂಟಾಗಿರುತ್ತದೆ ಎಂದು ಆಕ್ಷೇಪಣೆ ನೀಡಿರುತ್ತಾರೆ. ಈ ಕುರಿತು ಮಾನ್ಯ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಬೆಂಗಳೂರು ಇವರು ತಮ್ಮ ಜ್ಞಾಪನ ಪತ್ರ ಸಂಖ್ಯೆ: ಎಯುಡಿ/39/2018-19/ಡಿಸಿ-01/18-19 ದಿನಾಂಕ: 16-01-2019 ರಂದು ಸದರ ಕಂಡಿಕೆಯ ಬಗ್ಗೆ ಕರ್ನಾಟಕ ಮುದ್ರಾಂಕ ಕಾಯ್ದೆ 1957 ರ ಕಲಂ 46ಎ ಮತ್ತು ನೋಂದಣಿ ಕಾಯ್ದೆ 1908 ರ ಕಲಂ 80ಎ ರಡಿ ಕ್ರಮ ಜರುಗಿಸಿ / ಆದೇಶ ಹೊರಡಿಸಿ ಅಥವಾ ವಸೂಲಾತಿಗೆ ಆದೇಶ ಹೊರಡಿಸಲು ಸೂಚಿಸಿರುತ್ತಾರೆ.

ಮಹಾಲೇಖಪಾಲರ ಆಕ್ಷೇಪಣೆ ಹಾಗೂ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಬೆಂಗಳೂರು ಇವರ ಆದೇಶದ ಅನುಸಾರ ಈ ಪ್ರಕರಣವನ್ನು ಕರ್ನಾಟಕ ಮುದ್ರಾಂಕ ಕಾಯ್ದೆ 1957 ರ ಕಲಂ 46ಎ ಹಾಗೂ ನೋಂದಣಿ ಕಾಯ್ದೆ 1908 ರ ಕಲಂ 80ಎ ರ ಅಡಿ ದಾಖಲಿಸಿಕೊಂಡು ಈ ಕಛೇರಿ ಆದೇಶ ಸಂಖ್ಯೆ: ಎಯುಡಿ/46ಎ & 80ಎ/3699 ರಿಂದ 3721/2020-21 ದಿನಾಂಕ: 04-06-2020 ರ ಪ್ರಕಾರ ಸದರಿ ಕಲಂಗಳ ಅಡಿ ಮುಂದಿನ ಕ್ರಮ ಜರುಗಿಸಲು ಆದೇಶಿಸಿರುತ್ತದೆ. ಈ ಪ್ರಕಾರ ಪ್ರತಿವಾದಿಗಳಿಗೆ ದಿನಾಂಕ: 04-06-2020 ಮತ್ತು 15-07-2020 ರಂದು ನೋಟೀಸು ಜಾರಿ ಮಾಡಿ ಕೊರತೆ ಶುಲ್ಕಗಳನ್ನು ಭರಣಾ ಮಾಡಲು ಅಥವಾ ಈ ಕುರಿತು ತಮ್ಮ ಲಿಖಿತ ಹೇಳಿಕೆ ಸಲ್ಲಿಸಲು ಸೂಚಿಸಲಾಗಿತ್ತು. ಸದರ ನೋಟೀಸಿಗೆ ಉತ್ತರವಾಗಿ ಪ್ರತಿವಾದಿಗಳು ದಿನಾಂಕ: 04-09-2020 ರಂದು ಅಂಚೆಯ ಮುಖಾಂತರ ತಮ್ಮ ಲಿಖಿತ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಸದರಿಯವರ ಹೇಳಿಕೆಯಲ್ಲಿ ಈ ಕೆಳಗಿನಂತೆ ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. "ಪ್ರಸ್ತುತ ದಸ್ತಾವೇಜುಗಳಲ್ಲಿ ಒಳಗೊಂಡ ಸ್ಥಿರಾಸ್ತಿಯು ಯಾವುದೇ ಅಭಿವೃದ್ಧಿಯಾಗದೇ ಇರುವ ಪ್ರದೇಶವಾಗಿರುತ್ತದೆ. ಹಾಗೂ ಇದರಲ್ಲಿ ಯಾವುದೇ ರೀತಿಯಲ್ಲಿ ಲೇ-ಓಟ ಆಗಿ ಪರಿವರ್ತಿಸಿರುವುದಿಲ್ಲಾ. ಇದರಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯ ಕೈಗೊಂಡಿರುವುದಿಲ್ಲ ಹಾಗೂ ನಾಗರೀಕ ಸೌಲಭ್ಯಗಳು ಇರುವುದಿಲ್ಲಾ. ನಾವು ದಸ್ತಾವೇಜು ನೋಂದಾಯಿಸುವಾಗ ಚಾಲ್ತಿಯಲ್ಲಿದ್ದ ಬೆಳಗಾವಿ ತಾಲೂಕಿನ ಸ್ಥಿರಾಸ್ತಿಗಳ ಮೌಲ್ಯ ಮಾಪನ ಉಪ ಸಮಿತಿಯವರು ನಿಗದಿಪಡಿಸಿದಂತೆ, ಮೌಲ್ಯ ಮಾಪನಕ್ಕೆ ಸಂಬಂಧಿಸಿದಂತೆ ಅನ್ವಯಿಸುವ ವಿಶೇಷ ಸೂಚನೆ ಸಂಖ್ಯೆ: 2 ರ ಪ್ರಕಾರ ಬೆಳಗಾವಿ ಕೃಷಿ ಜಮೀನು ಬೆಲೆ ಪ್ರತಿ ಎಕರೆಗೆ ರೂ. 26,89,000/-ಇರುವ ಬೆಲೆಗೆ ಅಭಿವೃದ್ಧಿಯಾಗದೇ ಇರುವ ಕೃಷಿಯೇತರ ಉಪಯೋಗಕ್ಕೆ ವಸತಿ ಉದ್ದೇಶಕ್ಕೆ ಶೇ 65% ರಷ್ಟು ಹೆಚ್ಚಿಸಿದರೆ ಪ್ರತಿ ಎಕರೆಗೆ ರೂ. 42,95,000/-ಗಳಾಗುತ್ತದೆ. ಹಾಗೂ ವಾಣಿಜ್ಯ ಉದ್ದೇಶಕ್ಕೆ ಶೇ 75% ರಷ್ಟು ಹೆಚ್ಚಿಸಿದರೆ ರೂ. 46,97,000/-ಗಳಾಗುತ್ತದೆ. ಆದರೆ ನಾವು ನೋಂದಾಯಿಸಿದ ಬೆಲೆ ಪ್ರತಿ ಎಕರೆಗೆ ರೂ. 2,87,37,343/-ಆಗುತ್ತದೆ. ಅಂದರೆ ಮಾರ್ಗಸೂಚಿ ಬೆಲೆಯಂತೆ ಸುಮಾರು ಮೂರು ಪಟ್ಟು ಹೆಚ್ಚಿಗೆ ಆಗುತ್ತದೆ. ಕಾರಣ ಸದರಿ ಸ್ಥಿರಾಸ್ತಿಯನ್ನು ಅಪಮೌಲ್ಯ ಮಾಡಿ ನೋಂದಾಯಿಸಿರುವುದಲ್ಲಾ. ತಮ್ಮ ನೋಟೀಸಿನಲ್ಲಿ ತಿಳಿಸಿದಂತೆ

ಮಹಾಲೇಖಪಾಲರ ಆಕ್ಷೇಪಣೆಯು ಆಧಾರ ರಹಿತವಾಗಿರುತ್ತದೆ ಎಂದು ವಾದಿಸಿ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ಈ ಬಗ್ಗೆ ಮಹಾಲೇಖಪಾಲರ ಆಕ್ಷೇಪಣೆ ಹಾಗೂ ಪ್ರತಿವಾದಿಗಳು ಸಲ್ಲಿಸಿದ ಲಿಖಿತ ಹೇಳಿಕೆ ಮತ್ತು ದಾಖಲಾತಿಗಳನ್ನು ಪರಿಶೀಲಿಸಲಾಯಿತು. ಸದರಿ ಪರಿಶೀಲನೆಯಿಂದ ಮಹಾಲೇಖಪಾಲರ ಆಕ್ಷೇಪಣೆಯಂತೆ ಜಾರಿ ಮಾಡಿದ ನೋಟೀಸು ಕಾನೂನು ರೀತ್ಯ ಹಾಗೂ ನ್ಯಾಯಸಮ್ಮತವಾಗಿರುತ್ತದೆ. ಆದ್ದರಿಂದ ಪ್ರತಿವಾದಿಗಳ ವಾದವನ್ನು ತಿರಸ್ಕರಿಸಲಾಗಿದೆ.

ಈ ಮೇಲ್ಕಂಡಂತೆ ಮಹಾಲೇಖಪಾಲರ ಆಕ್ಷೇಪಣೆಯು ನ್ಯಾಯ ಸಮ್ಮತವಾಗಿರುವುದರಿಂದ ಕೊರತೆ ಶುಲ್ಕಗಳ ವಸೂಲಾತಿಗೆ ಈ ಕೆಳಗಿನಂತೆ ಆದೇಶಿಸಿದೆ.

: ಆದೇಶ :

ಸಂಖ್ಯೆ:ಎಯುಡಿ/46–ಎ&80–ಎ/3699 ರಿಂದ 3721/2020–21 ದಿನಾಂಕ: 25–11–2020

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಆಧಾರದ ಮೇಲೆ ಕರ್ನಾಟಕ ಮುದ್ರಾಂಕ ಕಾಯ್ದೆ 1957 ರ ಕಲಂ 46–ಎ ರ ಅಡಿ ಮತ್ತು ಭಾರತೀಯ ನೋಂದಣಿ ಕಾಯ್ದೆ 1908 80ಎ ರ ಅಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮುದ್ರಾಂಕಗಳ ಉಪ–ಆಯುಕ್ತ ಹಾಗೂ ಜಿಲ್ಲಾ ನೋಂದಣಿ ಅಧಿಕಾರಿಯಾದ ನಾನು ಪ್ರಶ್ನಿತ ಈ ಕೆಳಕಂಡ ಕ್ರಯ ದಸ್ತಾವೇಜುಗಳಲ್ಲಿ ಒಳಗೊಂಡ ಕೊರತೆ ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕಗಳನ್ನು ಸರ್ಕಾರಕ್ಕೆ ಪಾವತಿಸಲು ಆದೇಶಿಸಿದ್ದೇನೆ.

ಕ್ರ ಸಂ	ದಸ್ತಾವೇಜು ಸಂಖ್ಯೆ	ಕೊರತೆ ಮುದ್ರಾಂಕ ಶುಲ್ಕ	ಕೊರತೆ ನೋಂದಣಿ ಶುಲ್ಕ	ಒಟ್ಟು
1	3699/2015–16	ರೂ. 8,92,34,180/–	ರೂ. 9,01,355/–	ರೂ.9,01,35,535/–
2	3727/2015–16	ರೂ. 1,50,47,404/–	ರೂ. 1,51,994/–	ರೂ.1,51,99,398/–
3	3728/2015–16	ರೂ. 39,37,741/–	ರೂ. 39,775/–	ರೂ. 39,77,516/–
4	3730/2015–16	ರೂ. 35,81,853/–	ರೂ.36,180/–	ರೂ. 36,18,033/–
5	3706/2015–16	ರೂ. 10,32,121/–	ರೂ. 10,425/–	ರೂ. 10,42,546/–
6	3718/2015–16	ರೂ. 58,77,899/–	ರೂ. 59,373/–	ರೂ. 59,37,272/–
7	3723/2015–16	ರೂ. 5,87,708/–	ರೂ. 5,936/–	ರೂ. 5,93,644/–
8	3747/2015–16	ರೂ. 9,40,402/–	ರೂ. 9,499/–	ರೂ. 9,49,901/–
9	3721/–2015–16	ರೂ. 37,62,255/–	ರೂ. 38,003/–	ರೂ. 38,00,258/–
ಕಟ್ಟಡ ಮೌಲ್ಯ		ರೂ. 38,77,493/–	ರೂ. 39,167/–	ರೂ. 39,16,660/–
ಒಟ್ಟು		**ರೂ. 12,78,79,956/–**	**ರೂ. 12,90,707/–**	**ರೂ. 12,91,70,763/–**

ಪ್ರತಿವಾದಿಯು ಈ ಆದೇಶ ಹೊರಡಿಸಿದ 90 ದಿನದೊಳಗಾಗಿ ಸರ್ಕಾರದ ಲೆಕ್ಕ ಶೀರ್ಷಿಕೆ ಬಾಬ್ತಿಗೆ ಜಮಾ ಮಾಡಿ ಅಸಲು ಚಲನನ್ನು ಈ ಪ್ರಾಧಿಕಾರಕ್ಕೆ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಸದರಿ ಮೊಬಲಗನ್ನು ಭೂಕಂದಾಯ ಬಾಕಿಯಂದು ಪರಿಗಣಿಸಿ ವಸೂಲಾತಿ ಕ್ರಮ ಜರುಗಿಸಲಾಗುವುದು.

ಆದೇಶವನ್ನು ಇಂದು, ದಿನಾಂಕ: 25-11-2020 ರಂದು ಹೇಳಿ ಬರೆಸಿ, ಸರಿ ನೋಡಿ ತೆರೆದ ನ್ಯಾಯಾಲಯದಲ್ಲಿ ಉಚ್ಚರಿಸಲಾಯಿತು.

ಜಿಲ್ಲಾ ನೋಂದಣಾಧಿಕಾರಿಗಳು
ಹಾಗೂ ಮುದ್ರಾಂಕಗಳ ಉಪ-ಆಯುಕ್ತರು,
ಬೆಳಗಾವಿ.

ಪ್ರತಿಗಳನ್ನು :-

1. Shri Harsha Babu Dammanagi, Managing Director, Dammanagi & Sanu Developers PVT LTD No-137 Railway Parallel Road Kumar Park West, Bangalore-560020.
2. Shri Babu Advеppa Dammanagi, Chairman, Dammanagi & Sanu Developers PVT LTD No-137 Railway Parallel Road Kumar Park West, Bangalore-560020.
3. ಮಾನ್ಯ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಕಂದಾಯ ಭವನ 8ನೇ ಮಹಡಿ, ಕೆ.ಜಿ ರಸ್ತೆ ಬೆಂಗಳೂರು ಇವರಿಗೆ ಮಾಹಿತಿಗಾಗಿ ಒಪ್ಪಿಸಿದೆ.
4. ಉಪನೋಂದಣಾಧಿಕಾರಿಗಳು ಬೆಳಗಾವಿ ಇವರಿಗೆ ಮಾಹಿತಿಗಾಗಿ.
5. ಕಛೇರಿ ಕಡತಕ್ಕೆ.

ಕರ್ನಾಟಕ ಸರ್ಕಾರ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಸಂಖ್ಯೆ:ಇವಿ(1)-38/20-21

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಕಂದಾಯ ಭವನ, 8ನೇ ಮಹಡಿ,
ಕೆ.ಜಿ.ರಸ್ತೆ, ಬೆಂಗಳೂರು-09,
ದಿನಾಂಕ: 15/6/21

ಅನುಬಂಧ-4

ಶ್ರೀ ವಿಷ್ಣುತೀರ್ಥ, ಉಪನೋಂದಣಾಧಿಕಾರಿ, ಉಪನೋಂದಣಿ ಕಛೇರಿ, ಬೆಳಗಾವಿ ಹಾಲಿ ಅಮಾನತ್ತಿನಲ್ಲಿರುವ ಇವರ ವಿರುದ್ಧ ಮಾಡಲಾದ ಆರೋಪಗಳನ್ನು ಸಮರ್ಥಿಸುವ ಸಾಕ್ಷಿದಾರರ ಪಟ್ಟಿ.

1. ಶ್ರೀ. ಮಹಾಂತೇಶ ಪಾಟಾತರ, ಜಿಲ್ಲಾನೋಂದಣಾಧಿಕಾರಿಗಳು, ಜಿಲ್ಲಾನೋಂದಣಿ ಕಛೇರಿ ಬೆಳಗಾವಿ
2. ಪೂರ್ವ ತಿಳುವಳಿಕೆಯೊಂದಿಗೆ ಅಗತ್ಯ ಕಂಡ ಇತರೆ ಸಾಕ್ಷಿ.

15/6/21

ಶಿಸ್ತು ಪ್ರಾಧಿಕಾರಿ ಹಾಗೂ
ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು
ಬೆಂಗಳೂರು